ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 04-07-2024

ಪಾಟಿ ಸವಾಲುಃ ಶ್ರೀ. ಡಿ.ಕೆ.ಟಿ ವಕೀಲರಿಂದ – 1 ಮತ್ತು 2 ನೇ ಪ್ರತಿವಾದಿಗಳ ಪರ ಃ-

ನನಗೆ ಚೆಕ್ ಅನ್ನು ಹೆಚ್.ಈ.ಅರುಣ್ ಕುಮಾರ್ ಕೊಟ್ಟಿದ್ದರು. ಅವರು ನನ್ನಿಂದ ಹಣ ಪಡೆದಿದ್ದರು ಅದನ್ನು ಮರು ಪಾವತಿ ಮಾಡುವ ಉದ್ದೇಶದಿಂದ ಸದರಿ ಚೆಕ್ ಅನ್ನು ನನಗೆ ಕೊಟ್ಟಿದ್ದರು. ಅರುಣ್ ಕುಮಾರ್ ರವರು ಸೋಮವಾರಪೇಟೆಯ ಸರ್ಕಾರಿ ಆಸ್ಪತ್ರೆಯ ಬಳಿ ಹಾಲಿನ ಡೈರಿಯಲ್ಲಿದ್ದರು. ಅಲ್ಲಿಯೇ ಹತ್ತಿರದಲ್ಲಿ ನನಗೆ ಸೇರಿದ ಒಂದು ಚಪ್ಪಳಿ ಅಂಗಡಿ ಇರುತ್ತದೆ. ನಾನು ಚೆಕ್ ಅನ್ನು ಬ್ಯಾಂಕ್ ಆಫ್ ಬರೋಡ ಅಬ್ಬೂರು ಕಟ್ಟೆ ಶಾಖೆಗೆ ಹಾಜರುಪಡಿಸಿರುತ್ತೇನೆ. ನಂತರ ಹಣ ತನ್ನ ಖಾತೆಗೆ ಹಾಕುವ ಸಂಬಂಧ ಬ್ಯಾಂಕ್ ನವರನ್ನು ಕೇಳಿರುತ್ತೇನೆ. ಅದಕ್ಕೆ ಬ್ಯಾಂಕ್ನವರು ಅದನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸೋಮವಾರಪೇಟೆ ಶಾಖೆಗೆ ಹಣ ಪಡೆಯುವ ಉದ್ದೇಶದಿಂದ ಕಳುಹಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಬ್ಯಾಂಕ್ ಆಫ್ ಬರೋಡದವರು ಚೆಕ್ ಅನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ಸೋಮವಾರಪೇಟೆಯ ಪ್ರೊಫೆಷನಲ್ ಕೋರಿಯರ್ ಮೂಲಕ ಕಳುಹಿಸಿರುವುದಾಗಿ ತಿಳಿಸಿರುತ್ತಾರೆ ಆದರೆ ಹಣ ಬಂದಿಲ್ಲ ಎಂದು ತಿಳಿಸಿರುತ್ತಾರೆ. ಅದೇ ರೀತಿ ನಾವು ಕಳುಹಿಸಿರುವ ಚೆಕ್ಕು ಕೂಡ ವಾಪಸ್ಸು ಬಂದಿಲ್ಲ ಎಂದು ತಿಳಿಸಿರುತ್ತಾರೆ.

ಈ ದಾವೆಯಲ್ಲಿ ಕೋರಿಯರ್ ಅವರನ್ನು ಮತ್ತು ಎಸ್.ಬಿ.ಐ ಸೋಮವಾರಪೇಟೆ ರವರನ್ನು ಪಕ್ಷಗಾರರಾಗಿ ಮಾಡಲು ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ. ಚೆಕ್ ಅನ್ನು ಬ್ಯಾಂಕ್ ಗೆ ಹಾಜರುಪಡಿಸಿದ ದಿಃ 06-06-2019 ಕ್ಕೆ ನನ್ನ

ಚೆಕ್ ನಲ್ಲಿ ಬರೆದಿರುವ ಹಣ ಎಸ್.ಬಿ.ಐ ನಲ್ಲಿ ನನಗೆ ಚೆಕ್ ಕೊಟ್ಟವರ ಖಾತೆಯಲ್ಲಿ ಹಣ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬ್ಯಾಂಕ್ನವರು ಚೆಕ್ ಬಂದಿದ್ದರೂ ಸಹ ಎಸ್.ಬಿ.ಐ ಖಾತೆಯಲ್ಲಿ ಚೆಕ್ಕು ಕೊಟ್ಟವರ ಖಾತೆಯಲ್ಲಿ ಹಣ ಇರಲಿಲ್ಲ ಎಂದು ತಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಸ್.ಬಿ.ಐ ರವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿದ ನಂತರ ಅರುಣ್ ಕುಮಾರ್ ರವರಿಗೆ ಸಮನ್ಸ್ ತಲುಪದ ರೀತಿ ನಾನೇ ತಡೆ ಹಿಡಿದಿದ್ದೆ ಎಂದರೆ ಸರಿಯಲ್ಲ. ಹಾಗಾಗಿ 1 ಮತ್ತು 2 ನೇ ಪ್ರತಿವಾದಿ ಬಿಟ್ಟು ಇತರೆ ಪ್ರತಿವಾದಿಗಳ ಅವಶ್ಯಕತೆ ಇಲ್ಲ ಎಂದು ತಿಳಿಸಿರುತ್ತೇನೆ ಎಂದರೆ ನಾನು ಮುಖ್ಯವಾಗಿ ಬ್ಯಾಂಕ್ ಗೆ ಚೆಕ್ ಅನ್ನು ಹಾಕಿದ್ದು ಬ್ಯಾಂಕ್ನವರೇ ಜವಾಬ್ದಾರರು ಎಂದು ನುಡಿದಿರುತ್ತಾರೆ.

ಬ್ಯಾಂಕ್ ನವರು ನನ್ನ ಚೆಕ್ ಅನ್ನು ಡ್ರಾ ಮಾಡಿ ದುರ್ಬಳಕೆ ಮಾಡಿಲ್ಲ ಎಂದರೆ ಆ ಚೆಕ್ಕು ವಾಪಸ್ಸು ಬಂದಿಲ್ಲ ಎಂದು ತಿಳಿಸಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳಿಂದ ನನಗೆ ಮೋಸ ಆಗಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಹಣ ತಿಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ 1 ಮತ್ತು 2 ನೇ ಪ್ರತಿವಾದಿಗಳು ಮಾತ್ರ ಹಣ ಕೊಡಬೇಕು ಉಳಿದ ಪ್ರತಿವಾದಿಗಳು ಹಣ ಕೊಡಬೇಕಾಗಿಲ್ಲ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ ನಾನು ಹಾಗೆ ಹೇಳಿರುವುದಿಲ್ಲ. ನನಗೆ ಅರುಣ್ ಕುಮಾರ್ ರವರಿಂದ ಹಣ ಬಂದರೆ ತೊಂದರೆ ಇಲ್ಲ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಸುಳ್ಳು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗೆ ನನಗೆ ಉತ್ತರ ಕೊಟ್ಟಿದ್ದಾರೆ ಎಂದರೆ ಸರಿ. ಆದರೆ ನನಗೆ ಚೆಕ್ಕು ವಾಪಸ್ಸು ಬಂದಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ಕೆಲಸ ತಾವು ಮಾಡಿರಬಹುದು ಆದರೆ ನನಗೆ ಹಣ ಬಂದಿಲ್ಲ. 1 ಮತ್ತು 2 ನೇ

ಪ್ರತಿವಾದಿಗಳು ಬ್ಯಾಂಕ್ ನ ನಿಯಮದಂತೆ ಅವರು ಕ್ರಮ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ನನ್ನ ಚೆಕ್ಕು ವಾಪಸ್ಸು ಬಂದಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ಅವರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಲಾಗಿತ್ತು ಎಂದರೆ ಯಾರಾದರೂ ಕೊಡಲಿ ನನಗೆ ಚೆಕ್ಕನ್ನು ಕೊಡಲಿ ಎಂದು ನುಡಿದಿರುತ್ತಾರೆ.

1 ಮತ್ತು 2 ನೇ ಪ್ರತಿವಾದಿಗಳು ಕಾನೂನು ಪ್ರಕಾರ ತಮ್ಮ ಕಾರ್ಯ ಮಾಡಿರುವುದರಿಂದ ಅವರ ನಿರ್ಲಕ್ಷ್ಯತೆ ಇಲ್ಲದೇ ಇರುವ ಕಾರಣ ಚೆಕ್ ನ ಹಣ ಮತ್ತು ಬಡ್ಡಿ ಕೊಡಲು ಬಾದ್ಯಸ್ಥರಲ್ಲ ಎಂದರೆ ಸಾಕ್ಷಿಯು ನನ್ನ ಚೆಕ್ಕು ನನಗೆ ವಾಪಸ್ಸು ಬರಬೇಕು / ಹಣ ಬರಬೇಕು ಎಂದು ಸಾಕ್ಷಿ ನುಡಿದಿರುತ್ತಾರೆ. 3 ರಿಂದ 5 ನೇ ಪ್ರತಿವಾದಿಗಳಿಗೆ ತೊಂದರೆ ಆಗಬಾರದು ಎಂಬ ಕಾರದಿಂದ ದಾವೆ ಹೂಡುವ ಸಮಯದಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಈಗ ಪಕ್ಷಗಾರರನ್ನಾಗಿ ಮಾಡಿಲಾಗಿದೆ ಎಂದರೆ ಸರಿಯಲ್ಲ. ಪರಿಹಾರ ಕೊಡುವುದು ಪ್ರತಿವಾದಿಗಳಿಗೆ ಸೇರಿದ್ದು ಯಾರಾದರೂ ಕೊಡಲಿ ನನ್ನ ಚೆಕ್ಕಿನ ಹಣ ಕೊಡಲು ಎಂದು ಸಾಕ್ಷಿ ನುಡಿದಿರುತ್ತಾರೆ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

Sd/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ